ಹೊರತು ಆಪಾದನೆ ಹೊರಿಸಲಾಗದು ಅಂತಾ ಆಗಲೇ ಹೇಳಿದ್ದೀನಲ್ಲ. ಆದರೆ ಆನಂದರಾಮ್ ಸಾವು ಆತ್ಮಹತ್ಯೆ ಅಲ್ಲ..."

"ನಿಜ! ಅವನಿಗೆ ಒಬ್ಬಳು ಗರ್ಲ್ ಫ್ರೆಂಡ್ ಇದ್ದಳು. ಕಾವ್ಯಾ ಅಂತಾ. ಹಿನ್ನೆಲೆ ಗಾಯಕಿ. ಅವರ ಸ್ನೇಹದ ವಿಚಾರ ಅವಳ ಗಂಡನಿಗೆ ಗೊತ್ತಾಗಿದೆ ಎಂದು ಕೆಲವು ಪತ್ರಿಕೆಗಳಲ್ಲಿ ಬಂದಿತ್ತು" ಎಂದು ಇನ್ನೊಂದು ಪೆಗ್ ನಿಧಾನವಾಗಿ ಹೀರುತ್ತ ನುಡಿದ ಕಾಮತ್.

"ಆ ಕೋನದಿಂದಲೂ ವಿಚಾರಣೆ ಆಗಿದೆ ಸರ್, ಅದಲ್ಲ..."

"ಸ್ಟಾಪ್ ಇಟ್ ಇನ್‌ಸ್ಪೆಕ್ಟರ್, ನೀವು ಏನು ಹೇಳುತ್ತಿದ್ದೀರಾ? ಆರು ತಿಂಗಳ ಕಾಲ ನನ್ನನ್ನು ಎಡೆಬಿಡದೇ ಸತಾಯಿಸಿದಿರಿ. ಏನಾದರೂ ಪ್ರೂವ್ ಮಾಡಲು ಆಯಿತಾ? ನನಗೂ ಅವನಿಗೂ ದ್ವೇಷ ಇತ್ತು ಅನ್ನುವ ಕಾರಣದಿಂದ ನಾನೇ ಸಾಯಿಸಿದ್ದು ಅಂತಾ ತೀರ್ಮಾನಕ್ಕೆ ಬಂದು ವಿಚಾರಣೆ ಮಾಡುತ್ತಿದ್ದೀರಿ. ನನ್ನ ಸಹನೆಗೂ ಒಂದು ಮಿತಿ ಇದೆ" ಅವನ ಧ್ವನಿಯಲ್ಲಿ ಅಹಂಕಾರ ತುಂಬಿತ್ತು. ನಾನು ಏನು ಮಾಡಬಲ್ಲೆ ಗೊತ್ತಾ ಎನ್ನುವ ಅರ್ಥ ಅದರಲ್ಲಿ ಅಡಗಿತ್ತು.

"ನನ್ನನ್ನು ನೋಡಬೇಕು ಎಂದು ಬಂದಿರಿ, ನೋಡಿದಿರಿ, ಹೊರಡಿ. ನಾನು ಒಂದು ಹೊಸ ಚಿತ್ರಕತೆ ಬಗ್ಗೆ ನೋಟ್ಸ್ ಮಾಡುತ್ತಿದ್ದೇನೆ. ನಿಮ್ಮ ಅನುಮಾನ ಪರಿಹಾರ ಆಗದಿದ್ದರೆ ನಾನು ಇನ್ನುಮೇಲೆ ಮಾತಾಡಲ್ಲ, ನನ್ನ ಲಾಯರ್ ಮಾತಾಡ್ತಾರೆ" ಎಂದು ಕುಳಿತಿದ್ದ ಕುರ್ಚಿಯಿಂದ ಎದ್ದ.

"ಅಯ್ಯೋ ಕೋಪ ಮಾಡ್ಕೋಬೇಡಿ ಸಾರ್. ಇನ್ನೊಂದೇ ಪ್ರಶ್ನೆ..."

"ಅಂದು ಆನಂದರಾಮ್ ಸತ್ತ ದಿನ ನಿಮಗಿದ್ದ ಅಲಬೈ ಒಂದೇ, ನೀವು ಶೂಟಿಂಗ್ ಸ್ಪಾಟ್‌ನಲ್ಲಿ ಒಂದು ವ್ಯಾನಿಟಿ ವ್ಯಾನ್‌ನಲ್ಲಿ ಇದ್ದೀರಿ ಅಂತಾ. ಆದರೆ ಅಷ್ಟೂ ಹೊತ್ತು ಅಲ್ಲಿಯೇ ಇದ್ದೀರಿ ಅಂತಾ ಪ್ರೂವ್ ಮಾಡಿದ್ದೀರಾ?"

"ಗೆಟ್ ಲಾಸ್ಟ್..." ಕೈಯಲ್ಲಿದ್ದ ಗ್ಲಾಸ್ ಅನ್ನು ನೆಲಕ್ಕೆ ಜೋರಾಗಿ ಕುಕ್ಕಿ ಕಿರುಚಿದ.

"ಸಾರ್ ಸಾರ್, ಇಡೀ ಕೇಸ್‌ನಲ್ಲಿ ಇದೊಂದೇ ವೀಕ್ ಲಿಂಕ್. ಅದಕ್ಕೇ ಕೇಳಿದೆ. ನಾಳೆ ಕೇಸ್ ಕ್ಲೋಸ್ ಆದಮೇಲೆ ಮತ್ತೆ ರೀ ಓಪನ್ ಮಾಡಕ್ಕೆ ಅವಕಾಶ ಇರಬಾರದು ನೋಡಿ. ಸಾರಿ ಸರ್, ಇದೋ ಹೊರಟೆ ಸಾರ್" ಅದೇ ವಿನಯದಿಂದ ತನ್ನ ಹಳದಿ ಹಲ್ಲುಗಳನ್ನು ಪ್ರದರ್ಶಿಸುತ್ತಾ ಎದ್ದು ನಿಂತ ಇನ್‌ಸ್ಪೆಕ್ಟರ್ ನಾಗರಾಜಯ್ಯ.

ಅವನ ಮಾತುಗಳನ್ನು ಕೇಳಿ ಕಾಮತ್ ಸ್ವಲ್ಪ ತಣ್ಣಗಾದ. ಪೊಲೀಸರನ್ನು ಎದುರು ಹಾಕಿಕೊಳ್ಳುವುದು ಸರಿಯಲ್ಲ ಎಂದು ನಿಧಾನವಾಗಿ, "ಸಾರಿ... ಒಂದುಕ್ಷಣ ಕಂಟ್ರೋಲ್ ಕಳೆದುಕೊಂಡೆ. ನಿಮ್ಮ ಕೆಲಸಕ್ಕೆ ನೀವು ಬಂದಿದ್ದೀರಿ, ನಾನು ಕೋಪಿಸಿಕೊಳ್ಳಬಾರದಿತ್ತು. ಎಲ್ಲರಿಂದ ಇದೇ ಪ್ರಶ್ನೆ. ಉತ್ತರ ಹೇಳಿ ಹೇಳಿ ಸಾಕಾಗಿದೆ. ಸಿನಿಮಾರಂಗದಲ್ಲಿ ಕೂಡಾ ನನ್ನ ಬಗ್ಗೆ ವಿಧ ವಿಧವಾಗಿ ಆಡಿಕೊಳ್ಳುತ್ತಿದ್ದಾರೆ. ಸಾರಿ, ನನಗೆ ತಡೆಯಲಾಗಲಿಲ್ಲ... ದಯವಿಟ್ಟು ಕುಳಿತುಕೊಳ್ಳಿ ಪ್ಲೀಸ್" ಎಂದು ನಾಗರಾಜಯ್ಯನ ಭುಜ ಹಿಡಿದು ಕೂರಿಸಲು ಮುಂದಡಿಯಿಟ್ಟ...

ಧಡಕ್ಕನೆ ಎರಡಡಿ ಹಿಂದೆ ಸರಿದ ನಾಗರಾಜಯ್ಯ! ಅವನನ್ನು ಮುಟ್ಟಿಸಿಕೊಳ್ಳಬಾರದೇನೋ ಎಂಬಂತೆ. ಅವನು ಹಿಂದಡಿಯಿಟ್ಟ ವೇಗ ಕಂಡು ಕಾಮತ್ ಒಂದು ಕ್ಷಣ ಬೆದರಿದ.

"ಪರವಾಗಿಲ್ಲ ಸಾರ್, ನಾನು ಕೇಸ್ ಕ್ಲೋಸ್ ಮಾಡಿದ ಮೇಲೆ ಕೂಡಾ ಯಾರಾದರೂ ಒಂದು ಸಣ್ಣ ಪಾಯಿಂಟ್ ಹಿಡಿದು ನಿಮ್ಮನ್ನು ಮತ್ತೆ ಸಿಗಿಸಬಾರದು ನೋಡಿ ಅದಕ್ಕೇ..."

"ಸರಿ, ನಿಮ್ಮ ಮನಸ್ಸಿಗೆ ಸಮಾಧಾನವಾಗಿದ್ದರೆ ಹೋಗಿ ಬನ್ನಿ... ನನ್ನ ಸ್ನೇಹಿತ ಹಿಂದಿಯಲ್ಲಿ